

# ಜೀವೋತ್ಕರ್ಷಕ್ಕೆ ಮಾಧ್ಯಮ ಸಂಗೀತ

ನನ್ನ ಬಾಲ್ಯ ಬೆಳೆದಿದ್ದೇ ಸಂಗೀತದೊಂದಿಗೆ. ಪ್ರತಿದಿನ ಹೊತ್ತು ಮುಳುಗುವಾಗ ದೇವರ ದೀಪ ಹಚ್ಚಿದ ಅಮ್ಮ ನಂತರ ಕೆಲಸ ಮಾಡುತ್ತಲೇ ದಾಸರ ಪದಗಳನ್ನು, ಸುಳಾದಿಗಳನ್ನು, ಉಗಾಭೋಗಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದಳು, ತಿಂಗಳ ರಜೆಯ ಮೂರು ದಿನ ದೇವರಿಗೆ ದೀಪವಿರದಿದ್ದರೂ ಅವಳ ಹಾಡಿನ ಹಣತೆ ಉರಿಯುತ್ತಿತ್ತು. ಯಾರು ಕೇಳಲಿ, ಬಿಡಲಿ ಅವಳು ಹಾಡುವಿಕೆಯನ್ನು ಮಾತ್ರ ತಪ್ಪಿಸುತ್ತಿರಲಿಲ್ಲ. ಹೀಗಾಗಿ ಹೋಂವರ್ಕ್ ಮಾಡುತ್ತಲೇ ಅವಳ ಹಾಡಿಗೆ ಕಿವಿಯಾಗುತ್ತಿದ್ದೆವು.

ಬೆಳಿಗ್ಗೆ ಮಂಗಳೂರು ಆಕಾಶವಾಣಿಯ ವಂದನದಲ್ಲಿ ಬರುತ್ತಿದ್ದ ಭಕ್ತಿಗೀತೆಗಳು, ದೇಶಭಕ್ತಿಗಳನ್ನು ಅವಳು ಬಿಡದೆ ಕೇಳುತ್ತಿದ್ದುದರಿಂದ ನಮಗೂ ಕೇಳಿಸಿಕೊಳ್ಳುವ ಅಭ್ಯಾಸವಾಯಿತು. ಮೊಬೈಲಿನಲ್ಲಿ ಕೇಳುವ ಸೌಲಭ್ಯ ಬಂದ ಮೇಲೆ ಬೆಂಗಳೂರಿನಲ್ಲಿ ಎಷ್ಟೇ ಖಾಸಗಿ ಎಫ್‌ಎಂಗಳಿದ್ದರೂ 'ಮಂಗಳೂರು ಆಕಾಶವಾಣಿ ನನ್ನ ಬೆಳಗಿಗೆ ಜೊತೆಯಾಗಿದೆ. ಬಾಲ್ಯದಲ್ಲಿ ಕೇಳುತ್ತಿದ್ದ ಹಾಡುಗಳು ಪ್ರಸಾರವಾದಾಗೆಲ್ಲ ತವರುಮನೆಯಲ್ಲಿದ್ದಂತೆ ಭಾಸವಾಗುತ್ತದೆ.

ನನ್ನ ತಂದೆ ಕನ್ನಡ ಪ್ರಾಧ್ಯಾಪಕರಾಗಿದ್ದರಿಂದ ಅವರು ಆಗಾಗ 'ಶ್ರೀವನಿತೆಯರರಸನೆ, 'ರಾಮ ತಪೋವನಾಭಿಗಮನಂ, 'ಛಲದೊಳ್ ದುರ್ಯೋಧನಂ ಮುಂತಾದ ಹಳೆಗನ್ನಡದ ಕಾವ್ಯವನ್ನು ಹಾಡಿ ತೋರಿಸುತ್ತಿದ್ದರು. ನನ್ನ ಮಕ್ಕಳು ಹುಟ್ಟಿದ ಸಮಯದಲ್ಲೂ ಅಂಥ ಕಾವ್ಯಗಳ ಜೋಗುಳ ಹಾಡಿ ಮಲಗಿಸುತ್ತಿದ್ದರು, ಹೀಗಾಗಿ ನನ್ನ ಬಾಲ್ಯದಲ್ಲಿ ಹಾಗೂ ನನ್ನ ಮಕ್ಕಳ ಬಾಲ್ಯದಲ್ಲಿ ಗಮಕವನ್ನು ಕೇಳಿಸಿಕೊಳ್ಳುವ ಸದವಕಾಶಕ್ಕೆ ಸಾಕ್ಷಿಯಾಗಿದ್ದೆ. ಅವರು ನಾಟಕದ ತಾಲೀಮನ್ನು ಮನೆಯಲ್ಲಿ ನಡೆಸುತ್ತಿರುವಾಗ ಹಾಡುತ್ತಿದ್ದ ರಂಗಗೀತೆಗಳು ಆ ಸಮಯದಲ್ಲಿ ಬಾಯ್ದೆರೆಯಾಗಿತ್ತು.

ಯಕ್ಷಗಾನ ಕಲಿಯುವಾಗ 'ನವಿಲು ಕುಣಿಯುತಿದೆ ನೋಡಿ', 'ಚಂದದಿಂದ ಬಂದಳಬ್ಜೆ ಲೋಚನೆ' ಹಾಗೂ ರಾತ್ರಿ ಆಟ ನೋಡಲು ಹೋದಾಗ ಭಾಗವತಿಕೆಯ ರೌದ್ರ, ವೀರ, ಶೃಂಗಾರದ ಹಾಡುಗಳು ಚಂಡೆಮದ್ದಳೆಯೊಂದಿಗೆ ಮೋಡಿ ಮಾಡಿಬಿಡುತ್ತಿದ್ದವು. ಮುಂಗಾರು ಹಿಂಗಾರಿನ ಸಮಯದಲ್ಲಿ ಒಕ್ಕಲುಗಳು ಜೋಡೆತ್ತುಗಳೊಂದಿಗೆ ಗದ್ದೆಯಲ್ಲಿ ನೆಟ್ಟಿ ಮಾಡುವಾಗ ಏಕತಾನತೆ ನಿವಾರಿಸಲು ಹಾಡುತ್ತಿದ್ದ ಆಶುಕವಿತ್ವದ 'ಒಳಾಲ್'ಗಳ ಸಾಹಿತ್ಯ ಅರಿವಿಗೆ ಬಾರದಿದ್ದರೂ 'ಓಓಓ' ಅನ್ನುವ ತಾರಕಸ್ವರ ಬೆಳಗಿನ ಮೌನವನ್ನು ಸೀಳಿ ಎದೆಗೆ ಇಳಿಯುತ್ತಿತ್ತು.

ಇವೆಲ್ಲವುಗಳ ಪ್ರಭಾವದಿಂದ ನನಗೀಗ ಮಕ್ಕಳನ್ನು ಶಾಲೆಗೆ ಕಳುಹಿಸಿದ ಮೇಲೆ ಕೆಲಸ ಮುಗಿಯುವವರೆಗೆ ಹಾಡುಗಳು ಚಾಲೂ ಇರಲೇಬೇಕು, (ಮುಂಚೆ ಇಷ್ಟು ಸುಲಭದಲ್ಲಿ ಹಾಡುಗಳು ಲಭ್ಯವಿರುತ್ತಿರಲಿಲ್ಲ!) ಬಾಳಪ್ಪ ಹುಕ್ಕೇರಿ, ಕಾಳಿಂಗ ರಾವ್‌ರಿಂದ ಹಿಡಿದು ಈಗಿನ ಯುವಗಾಯಕರ ಹಾಡುಗಳನ್ನು ಕೇಳುವ ಹುಕಿಗೆ ಬಿದ್ದಿರುವ ನಾನು ಕರ್ನಾಟಕ, ಹಿಂದೂಸ್ತಾನಿ ಸೇರಿ ಭಾವಗೀತೆಗಳು, ಜನಪದ, ವಾದ್ಯಸಂಗೀತ, ಸಿನಿಮಾ ಕೊನೆಗೆ ಮಕ್ಕಳು ಇಷ್ಟಪಟ್ಟು ಕೇಳುವ ಹಾಗೂ 'ಅಮ್ಮ, ಇವತ್ತು ಇದನ್ನು ಕೇಳು' ಎಂದು ರೆಕಮೆಂಡ್ ಮಾಡುವ (ಸಾಹಿತ್ಯ ತಿಳಿಯದಿದ್ದರೂ) ಪಾಶ್ಚಾತ್ಯ ಟೈಲರ್‌ಸ್ವಿಫ್ಟ್, ಎಡ್‌ಶೀರನ್‌ನ ಹಾಡುಗಳನ್ನು ಕೇಳುವೆ. ಸಂಗೀತದೊಂದಿಗೆ ಸಾಹಿತ್ಯವೂ ನನಗೆ ಅಷ್ಟೇ ಪ್ರಭಾವಶಾಲಿಯಾಗಿರುವುದರಿಂದ ಅವೆರಡರ ಮೇಳೈಸುವಿಕೆಯಲ್ಲಿ ತಾಳ್ಮೆ, ಏಕಾಗ್ರತೆ, ಧನಾತ್ಮಕತೆ, ಬದುಕನ್ನು ಸಮಚಿತ್ತದಲ್ಲಿ ಮುನ್ನಡೆಸಲು ಜೀವೋತ್ಕರ್ಷದ ಮಾಧ್ಯಮವಾಗಿದೆ.

—ಶ್ರೀರಂಜನಿ ಅಡಿಗ, ಬೆಂಗಳೂರು


